(ಶ್ರೀ ಕೆ. ಮಲ್ಲಪ್ಪ)

ಬ್ಲಾಕ್ ಮಾರ್ಕೆಟ್ ಮಾಡುತ್ತಾರೆ. ಆದುದರಿಂದ ಇಂಥವರನ್ನು ಕಂಡು ಹಿಡಿಯುವುದು ಕಷ್ಟವಾಗುತ್ತದೆ. ಈಗ ಇದನ್ನೆಲ್ಲ ಸರಿ ಮಾಡಬೇಕೆಂದು, ಒಳ್ಳೆಯವರಿಗೆ, ಯಾರು ಸರಿಯಾಗಿ ಕೆಲಸ ಮಾಡುತ್ತಾರೆಯೋ ಅಂಥವರಿಗೆ stainless steel ಕೊಡತಕ್ಕ ಉದ್ದೇಶದಿಂದ ಒಂದು ಕಮಿಟಿಯನ್ನು ಏರ್ಪಾಡು ಮಾಡುತ್ತೇವೆ. ಆ ಕಮಿಟಿಯವರು ಎಲ್ಲ ವಿಚಾರಗಳನ್ನೂ ಗಣನೆಗೆ ತೆಗೆದುಕೊಂಡು inspection ವಗೈರೆ ಮಾಡಿ ಯೋಗ್ಯರಿಗೆ ಕೊಡುವಂತೆ ಮಾಡಿ ಅದಷ್ಟು ಮಟ್ಟಿಗೆ ಭದ್ರಪಡಿಸಬೇಕೆಂದು ಎಲ್ಲ ಪ್ರಯತ್ನಗಳನ್ನೂ ಸರ್ಕಾರ ಮಾಡುತ್ತಿದೆ.

ಶ್ರೀ ಇ. ನಾರಾಯಣಗೌಡ.—ಮೊದಲನೆಯ ಸಲ ಕೋಟ ಪಡೆದವರು ಸದುಪಯೋಗ ಪಡಿಸಿದ್ದಾರೆಯೇ ದುರುಪಯೋಗ ಪಡಿಸಿದ್ದಾರೆಯೇ ಎಂದು ಸರಿಯಾದ ವಿಚಾರಣೆ ನಡೆಸಿ ಎರಡನೆಯ ಸಲ ಕೋಟ ಕೊಡುವಾಗ ಒಂದು ರಿಪೋರ್ಟ್ ತರಿಸಿಕೊಂಡು ಕೊಡುವುದು ಉತ್ತಮವಲ್ಲವೇ?

ಶ್ರೀ ಕೆ. ಮಲ್ಲಪ್ಪ.—ಮೊದಲನೆಯ ಸಲ ಕೊಟ್ಟ ಕೋಟಾ ಸದುಪಯೋಗವಾಗಿದೆಯೇ ಅಥವಾ ದುರುಪಯೋಗವಾಗಿದೆಯೇ ಎಂಬುದನ್ನು ತಿಳಿದುಕೊಂಡು ಎರಡನೆಯ ಕೋಟಾ ಹಂಚುವ ಏರ್ಪಾಡು ಮಾಡುತ್ತೇವೆಂಬ ಭರವಸೆಯನ್ನು ನಾನು ಕೊಡುತ್ತೇನೆ.

Amount spent for the construction of new Tank at Nagarabhavi in Manchenahalli Hobli, Gauribidanur Taluk.

*Q.—371. Sri R. N. LAKSHMIPATHI (Gauribidanur).—

Will the Government be pleased to state :—

(*a*) whether they have spent any amount for the construction of new tank at Nagarabhavi in Manchenahally Hobli, Gauribidanur Taluk, and if so, the amount spent;

(*b*) at what stage the work of the tank is pending now?

A.—Sri ALUR HANUMANTHAPPA (Deputy Minister for Minor Irrigation).—

(*a*) Yes; Rs. 46,716.

(*b*) The question of continuance of the work or otherwise is under examination.

ಶ್ರೀ ಆರ್. ಎ. ಲಕ್ಷ್ಮೀಪತಿ.—46,716 ರೂಪಾಯಿ ಕೆರೆಗೋಸ್ಕರ ಖರ್ಚು ಮಾಡಿದೆಯೆಂದು ಹೇಳಿದೆ. ಇದು ಯಾವಾಗ ಮಂಜೂರಾಯಿತು, ಖರ್ಚು ಮಾಡಿ ಎಷ್ಟು ವರ್ಷವಾಯಿತು?

Sri ALUR HANUMANTHAPPA.—This restoration work was sanctioned in 1954 but afterwards the Chief Engineer inspected the spot and found that the restoration was not feasible. He wanted to change the tank by alignment and construction of new tank. After that, estimates were prepared but there were some working and technical difficulties with regard to this work.

ಶ್ರೀ ಆರ್. ಎ. ಲಕ್ಷ್ಮೀಪತಿ.—ಈ ಒಂದು ನ್ಯೂನತೆಯನ್ನು ಕಂಡುಹಿಡಿದದ್ದು 46 ಸಾವಿರ ರೂಪಾಯಿ ಖರ್ಚು ಮಾಡುವುದಕ್ಕೆ ಮೊದಲೋ ಅಥವಾ ಖರ್ಚು ಮಾಡಿದ ಮೇಲೋ?

ಶ್ರೀ ಆಲೂರು ಹನುಮಂತಪ್ಪ.—ಮೊದಲೇ ಕಂಡುಹಿಡಿದರು. ಕಂಡುಹಿಡಿದು ಕೆರೆಯನ್ನು restore ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ದೊಡ್ಡ ಹಳ್ಳವಿರುವುದರಿಂದ ಒಡೆದಿರುವ ಸ್ಥಳವನ್ನು ತುಂಬುವುದಕ್ಕೆ ಆಗುವುದಿಲ್ಲ.

They preferred the construction of a new tank. They called for tenders but the tenderers quoted abnormal rates. So they decided to carry on the work on a piece-work basis. But labour was difficult to secure and it could not be worked on a piece-work system. Materials had to be collected from long distances. Therefore the work prolonged. Now we have received the revised estimates from the Chief Engineer and we will take further action.

ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಹಣವನ್ನು ಖರ್ಚು ಮಾಡುವುದರಿಂದ ಸ್ಥಳದ ಜನಗಳಿಗೆ ಕೆರೆ ಖಾತ್ರಿಯಾಗಿ ಆಗುತ್ತದೆಂಬ ನಂಬಿಕೆ ಇದೆ. ಆದುದರಿಂದ ಈಗಲಾದರೂ ಹೊಸದಾಗಿ ಎಸ್ಟಿಮೇಟ್ ತಯಾರಿಸಿ ಅದನ್ನು ಮಂಜೂರ್ಮಾಡಿ ಕೆರೆಯನ್ನು ಕಟ್ಟಿಸಿಕೊಡುತ್ತೇವೆಂಬ ಭರವಸೆಯನ್ನು ಕೊಡುತ್ತೀರಾ ಸ್ವಾಮಿ ?

Sri ALUR HANUMANTHAPPA.—We are examining the whole thing. The revised estimates are before the Government. We are considering that.

ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಹಾಗೆ ತಾವು ಹೊಸದಾಗಿ ಮಂಜೂರು ಮಾಡಿ ಕಟ್ಟಿಸದೇ ಇದ್ದ ಪಕ್ಷದಲ್ಲಿ 46 ಸಾವಿರ ರೂಪಾಯಿ waste ಆಗುತ್ತದೆ. ಇದಕ್ಕೆ ಯಾರು ಜವಾಬ್ದಾರರು ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಖರ್ಚು ಮಾಡಿದ್ದನ್ನು ನಷ್ಟ ಮಾಡಿಕೊಳ್ಳಬೇಕೆಂಬುದು ಸರ್ಕಾರದ ಉದ್ದೇಶವಲ್ಲ. ಯಾವ ರೀತಿ ಮಾಡಬೇಕೆಂದು ನಾವು ಪರ್ಯಾಲೋಚನೆ ಮಾಡಿದ್ದೇವೆ. ಆದಷ್ಟು ಜಾಗ್ರತೆ ಅದನ್ನು ತೀವ್ರತೆಯಿಂದ ತೆಗೆದುಕೊಳ್ಳುತ್ತೇವೆ.

Sri S. RAJAGOPAL.—What is the revised estimate expenditure ?

Sri ALUR HANUMANTHAPPA.—Rs. 3,20,000.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಹೊಸದಾಗಿ ಬಂದಿರುವ ಎಸ್ಟಿಮೇಟಿನ ಅಂದಾಜು ಎಷ್ಟು ?

ಶ್ರೀ ಆಲೂರು ಹನುಮಂತಪ್ಪ.—3,20,000 ರೂಪಾಯಿಗಳಿಗೆ ಅಂದಾಜಾಗಿದೆ ಎಂದು ಆಗಲೇ ಹೇಳಿದೆ.

Proposals for the amendment of the Corporation Act.

*Q.—377. Sri B. NANJAPPA (Cubbonpet).—

Will the Government be pleased to state :—

(*a*) whether the Corporation of the City of Bangalore have sent proposals for the amendment of the Corporation Act ;

(*b*) the stage at which the matter is pending at present ;

(*c*) when they intend to take necessary action in the matter ?

A.—Sri K. PUTTASWAMY (Minister for Municipal Administration).—

(*a*) Yes.

(*b*) and (*c*) Certain amendments have been approved and enacted as Mysore Act No. 32 of 1961. Other amendment proposed are under consideration.

The question of approving other amendments is likely to be finalised soon.